ತಾನೇನು ಗತಿಗೆಟ್ಟು ಇಲ್ಲಿಗೆ ಬಂದಿಲ್ಲವೆಂದೂ ಯಃಕಶ್ಚಿತ್ ಒಬ್ಬ ನರ್ಸಾಗಿ ಅವಳು ತನ್ನನ್ನು ಕೀಳಾಗಿ ನಡೆಸಿಕೊಳ್ಳುತ್ತಿದ್ದ ಬಗ್ಗೆ ಸತತವಾಗಿ ವದರಿದ. ಫಕ್ಕನೆ ಅವನ ಎದೆ ಭಾರ ಇಳಿದಂತಾಯ್ತು. ನಡು ನಡುವೆ ಅವನಿಂದ ಬಂದ ಅವಳ ಬಗೆಗಿನ ಎಲ್ಲ ನಿಂದನೆಗಳನ್ನು ಅವರು ಗಮವಿಟ್ಟು ಆಲಿಸಿದರು.

ರಾಮಚಂದ್ರನ್ ಕೂಗಾಡಿ ನಿಲ್ಲಿಸಿದ. ಬೆವೆತುಹೋಗಿ ನಡುಗುತ್ತಿದ್ದ ಅವನನ್ನು ನೋಡಿ ಕೊನೆಗೆ ಅವರು ಹೇಳಿದ್ದು ಇಷ್ಟು, "ನೀನು ಹೇಳುತ್ತಿರುವುದನ್ನೆಲ್ಲ ಕಾಗದದ ಮೇಲೆ ಬರೆದು ಕೊಡಬಲ್ಲೆಯಾ?" ಅಂತ ಕೇಳಿದರು. ಅವನು ಸುಮ್ಮನೆ ನಿಂತಿದ್ದ. ಕೆಲ ಕ್ಷಣಗಳ ನಂತರ ಈ ಪ್ರಪಂಚಕ್ಕೆ ಬಂದವನಂತೆ, "ಆಗಲಿ'' ಅಂದ. ಇವನೊಬ್ಬನನ್ನೇ ಬರೆಯಲು ಬಿಟ್ಟು ಎಲ್ಲರೂ ಕೋಣೆಯಿಂದ ಹೊರನಡೆದರು.

ಬರೆಯಲು ಕುಳಿತಾಗಲೇ ಇವನಿಗೆ ಗೊತ್ತಾಗಿದ್ದು, ಅಮಂಡಾಳ ಧೋರಣೆಗಳನ್ನು ದಾಖಲಿಸಲು ಹೋದರೆ ಅವುಗಳನ್ನು ಪದಗಳ ರೂಪದಲ್ಲಿಡಲಾಗುತ್ತಿರಲಿಲ್ಲ. ಅವೆಲ್ಲ ಅವನ ಅಭಿಪ್ರಾಯಗಳಂತಿದ್ದವು. ಯಾವ ಸಾಕ್ಷಿಗಳೂ ಇರಲಿಲ್ಲ. ಕಕ್ಕಾವಿಕ್ಕಿಯಾದ. ತನಗೆ ಬಂದ ರೀತಿಯಲ್ಲಿ ಬರೆದು ತನ್ನ ದೂರನ್ನು ದಾಖಲಿಸಿ ಬಂದ. ಇದನ್ನು ಅಮಂಡಳಿಗಿಂತ ಮೊದಲು ತಾನೇ ಯಾಕೆ ಮಾಡಲಿಲ್ಲ ಅಂತ ಹಳಿದುಕೊಂಡ.

ರಾಮಚಂದ್ರನ್‌ಗೆ ಸಂಬಳದ ಸಮೇತ ಎರಡು ದಿನಗಳ ರಜಾ ಕೊಟ್ಟರು. ಆ ಉದ್ವಿಗ್ನ ಸ್ಥಿತಿಯಲ್ಲಿ ಆತ ರೋಗಿಗಳಿಗೆ ಅಪಾಯಕಾರಿ ಅಂತ ಕಾರಣ ಕೊಟ್ಟಿದ್ದರು.

"ಕೊಡಲಿ, ಬಡ್ಡೀ ಮಕ್ಕಳು. ಅದೆಷ್ಟು ನಿಷ್ಠೆಯಿಂದ ದುಡಿದೆ, ಅದೆಷ್ಟು ವಿಧೇಯನಾಗಿದ್ದೆ, ತನ್ನ ಇಡೀ ಬದುಕನ್ನು ರೋಗಿಗಳ ಉದ್ಧಾರಕ್ಕಾಗಿ ತೇಯಲು ಸಿದ್ಧನಿದ್ದೆ. ಅಮಂಡಾಳಿಗೆ ನನ್ನನ್ನು ಕಂಡರೆ ಯಾವ ಜನ್ಮದ ಹಗೆಯಿತ್ತೋ... ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣ ಸಂಕಟ" ಅಂತ ಬೈದುಕೊಂಡ. ತಾನು ದೂರಹೋದಂತೆಲ್ಲ ಅವಳು ಬೆಕ್ಕಿನಂತೆ ಕಾಲಿಗೆ ಸುತ್ತಿಕೊಂಡಿದ್ದಳು. ಬಿಳಿಯರೆಲ್ಲ ಸೇರಿಕೊಂಡು ಅದೆಷ್ಟು ಅವಾಚ್ಯ ಶಬ್ದಗಳನ್ನು, ಲೈಂಗಿಕ ಅರ್ಥದ ಜೋಕುಗಳನ್ನು ಹೇಳಿಕೊಂಡು ನಗುತ್ತಿರಲಿಲ್ಲ. ಅವನ್ನೆಲ್ಲ ಕೇಳಿಸಿಕೊಂಡು ನಕ್ಕಿದ್ದನೇ ಹೊರತು ಯಾವತ್ತೂ ಕೆಟ್ಟ ಅರ್ಥದ ಮಾತನ್ನು ಆಡಿರಲಿಲ್ಲ. ಕೆಟ್ಟದಾಗಿ ನಡೆದುಕೊಂಡಿರಲಿಲ್ಲ. ಬಾಡಿ ಲ್ಯಾಂಗ್ವೇಜ್‌ನಲ್ಲಿ ಕೂಡ ಅವನು ಎಂದಿಗೂ ತಪ್ಪು ಮಾಡಿದವನಲ್ಲ. ಅಂತಹದ್ದರಲ್ಲಿ ಅವಳು ಅವನ ನಡತೆಯ ಬಗ್ಗೆ ಲಿಖಿತ ರೂಪದಲ್ಲಿ ದೂರುಕೊಟ್ಟಿದ್ದಳು. ಒಮ್ಮೆ ಬರಹದಲ್ಲಿ ದೂರು ಕೊಟ್ಟ ನಂತರ ಅದನ್ನು ಸಂಸ್ಥೆಯ ನಿಯಮಗಳ ಪ್ರಕಾರ ವಿಚಾರಣೆ ಮಾಡದೆ ವಿಧಿಯೇ ಇರಲಿಲ್ಲ.

''ಒಂದು ನಿಮಿಷ ಬಂದೆ'' ಎಂದು ಎತ್ತಿದ ಒಂದು ಬೆರಳ ಸನ್ನೆ ಅವಳಿಗೆ ಹೇಗೆ ತಪ್ಪಾಗಿ ಕಂಡುಬಂದಿತು? ಎರಡೂ ದಿನ ಎಲ್ಲ ಘಟನೆಗಳನ್ನೂ ನೆನೆ ನೆನೆದು ಅತ್ತು ಬಿಟ್ಟ. ಯಾರಲ್ಲಿ ಹೇಳಿಕೊಳ್ಳುವುದು? ಇಂಗ್ಲೆಂಡಿನಲ್ಲಿ ತಮ್ಮ ಬುದ್ಧಿವಂತ ಮಗ ಕೆಲಸಮಾಡುತ್ತಿದ್ದಾನೆಂದು ಬೀಗುತ್ತಿರುವ ತಂದೆ ತಾಯಿಗಳಲ್ಲೇ? ಸ್ನೇಹಿತರಲ್ಲೇ? ಅವರೂ 'ಬೆಂಕಿಯಿಲ್ಲದೆ ಹೊಗೆಯಾಡುವುದಿಲ್ಲ' ಎಂದುಬಿಟ್ಟರೆ? ತಂದೆ ತಾಯಿಗಳನ್ನು ಚೆನ್ನಾಗಿ ಸಾಕಲು ನನಗೆ ತಾಕತ್ತಿದ್ದರೂ ಈ ದೇಶಕ್ಕೆ ಯಾಕೆ ಬಂದೆ? ಒಬ್ಬನೇ ಮಗನಾದರೂ ಹೆತ್ತವರನ್ನ ಬಿಟ್ಟು ಬಂದದ್ದಕ್ಕೇ ನನಗೆ ಈ ಶಿಕ್ಷೆ ಅಂತ ಅವನಿಗೆ ಅನ್ನಿಸಿಬಿಟ್ಟಿತು.

ಇದು ಇಲ್ಲಿಗೇ ಮುಗಿಯುವುದಿಲ್ಲ, 'ಸಸ್ಪೆಂಡೆಡ್ ವಿಥ್ ಇನ್ವೆಸ್ಟಿಗೇಷನ್ ಪೆಂಡಿಂಗ್' ಅಂತ ಪತ್ರ ಕಳಿಸುತ್ತಾರೆ. ಆಮೇಲೆ ಎಲ್ಲರೆದರು ಸಾಕ್ಷಿ ಹೇಳಬೇಕು. ಅವಳ ಕಡೆಯವರು ನಾಲ್ವರಿರುತ್ತಾರೆ. ನಾನು ಒಬ್ಬ, ಅವತ್ತು ಎಲ್ಲರೆದುರಿಗೆ ಕೆಟ್ಟ ಮಾತಲ್ಲಿ ಅವಳನ್ನು ಬಯ್ದುಕೊಳ್ಳಬಾರದಿತ್ತು. ಅದೂ ತನ್ನ ವಿರುದ್ಧವೇ ಹೋಗುತ್ತದೆ. ಈ ಬಾರಿ ಸಂಯಮ ತಪ್ಪಿದ ಅಂತಾದರೆ, ಅವತ್ತು ಅಮಂಡಳ ವಿಚಾರದಲ್ಲೂ ಸಂಯಮ ತಪ್ಪಿರಬೇಕು ಎಂದು ಗುಮಾನಿಪಡುತ್ತಾರೆ.

ಸಸ್ಪೆಂಡ್ ಆದದ್ದು ಮುಂದೆ ಯಾವ ಆಸ್ಪತ್ರೆಯ ಕೆಲಸಕ್ಕೆ ಅರ್ಜಿ ಹಾಕಿದರೂ ದೊಡ್ಡದಾಗುತ್ತದೆ.